ಮರುದಿನ ಬೆಳಿಗ್ಗೆ ಥಾಣೆ ರೈಲ್ವೆ ಸ್ಟೇಷನ್‌ನಲ್ಲಿ ಏಳು ಗಂಟೆಗೆ ಮತ್ಸ್ಯಗಂಧ ರೈಲು ಫ್ಲ್ಯಾಟ್‌ಫಾರ್ಮ್ ನಂಬರ್ 8 ರಲ್ಲಿ ನಿಂತಿತು. ಸಾಮಾನು ತುಂಬಿದ ಬ್ಯಾಗಗಳ ಜೊತೆ ಇಳಿದರು ಅರವಿಂದ ಮತ್ತು ಪ್ರಿಯಾಂಕಾ.

ಬ್ಯಾಗ್‌ಗಳೆಲ್ಲವನ್ನೂ ಅರವಿಂದ ಲೆಕ್ಕ ಮಾಡಿದ, ಸರಿಯಾಗಿತ್ತು. ಈ ಬಾರಿ ಎಸ್.ಟಿ. ಬಸ್ಸು ಹಿಡಿಯೋದು ಬೇಡ, ಟ್ಯಾಕ್ಸಿ ಮಾಡಿಕೊಂಡೇ ಭಯಾಂದರ್‌ಗೆ ಹೋಗಬೇಕೆಂದು ಮೊದಲೇ ನಿರ್ಧರಿಸಿದ್ದರು. 'ಟ್ಯಾಕ್ಸಿ ಸ್ಟ್ಯಾಂಡ್ ತನಕ ಬ್ಯಾಗ್‌ಗಳನ್ನೆಲ್ಲಾ ನೀವೊಬ್ಬರೇ ಹೊತ್ತುಕೊಳ್ಳಬೇಡಿ. ನನಗಂತೂ ಭಾರದ ಬ್ಯಾಗ್‌ಗಳನ್ನು ಹಿಡಿಯಲು ಆಗದು. ಕೂಲಿ ಮಾಡಿ, ನಿಮ್ಮ ಶಕ್ತಿ ಪ್ರದರ್ಶನ ಮಾಡಿ ಕೈನೋವು ಮಾಡಿಕೊಂಡರೆ ನನಗೇ ಕಷ್ಟ' ಎಂದು ಪ್ರಿಯಾಂಕಾ ಎಚ್ಚರಿಕೆ ನೀಡಿದ್ದಳು. 'ಅದು ಸರಿ' ಎಂದು ಅರವಿಂದನೂ ಒಪ್ಪಿದ. ಕೂಲಿಯನ್ನು ಹುಡುಕುವಾಗ ಹತ್ತು ನಿಮಿಷ ಹಿಡಿಯಿತು. ಟ್ಯಾಕ್ಸಿ ಸ್ಟಾಂಡಿಗೆ ಇನ್ನೂರು ರೂಪಾಯಿ ಎಂದ. ಸ್ವಲ್ಪ ಹೆಚ್ಚಾದರೂ ಚರ್ಚೆ ಮಾಡದೆ ಟ್ಯಾಕ್ಸಿ ಸ್ಟಾಂಡಿಗೆ ಕೂಲಿಯವನ ಜೊತೆ ನಡೆದರು.

ಪ್ರಿಯಾಂಕಾ ತನ್ನ ಮೊಬೈಲ್ನಲ್ಲಿದ್ದ ಟ್ಯಾಕ್ಸಿ ಆಪ್ ಮೂಲಕ ಆನ್‌ಲೈನ್‌ನಲ್ಲಿ ಟ್ಯಾಕ್ಸಿ ಬುಕ್ ಮಾಡಿದಳು. ಪ್ರಿಯಾಂಕಾಳ ಅಕ್ಕನ ಮಗಳು ಸಿಂಧೂರ ರಜೆಯಲ್ಲಿ ಬೆಂಗಳೂರಿಂದ ಊರಿಗೆ ಬಂದಾಗ ಕೆಲವು ಹೊಸ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಿಕೊಟ್ಟಿದ್ದಳು. ಅದರಲ್ಲಿ ಟ್ಯಾಕ್ಸಿ ಆ್ಯಪ್ ಕೂಡಾ ಡೌನ್‌ಲೋಡ್ ಮಾಡಿಕೊಟ್ಟು ಅದರ ಮಾಹಿತಿ ನೀಡಿದ್ದಳು.



ಟ್ಯಾಕ್ಸಿ ಹಿಡಿದು ಭಯಾಂದರ್ ಮನೆ ಎದುರು ಇಳಿದಾಗ ಬೆಳಿಗ್ಗೆ ಎಂಟು ಗಂಟೆ ದಾಟಿತ್ತು. 'ನಾನು ಇಂದು ಕ್ಯಾಂಟೀನ್‌ನಲ್ಲಿ ಊಟ ಮಾಡುವೆ. ಆಫೀಸ್‌ಗೆ ಹೋಗಲೇಬೇಕು' ಎಂದು ಅವಸರದಿಂದಲೇ ಹಲ್ಲುಜ್ಜಿ ಸ್ನಾನಕ್ಕೆ ಹೋದ ಅರವಿಂದ. ಬರುವಾಗಲೇ ಟ್ಯಾಕ್ಸಿ ನಿಲ್ಲಿಸಿ ಪ್ರಿಯಾಂಕಾ ಹಾಲು ಮತ್ತು ಮೊಸರಿನ ಪ್ಯಾಕೆಟ್ ತೆಗೆದುಕೊಂಡಿದ್ದಳು.

'ಹಾಂ, ಆಯ್ತು ನೀವು ಸ್ನಾನ ಮಾಡಿ ಬನ್ನಿ. ನಾನು ಟೀ ಆದರೂ ಮಾಡಿಕೊಡುವೆ. ಜೊತೆಯಲ್ಲಿ ತಂದ ಬನ್ಸ್ ಇವೆ. ಟೀ ಮತ್ತು ಬನ್ ತಿಂದು ಆಫೀಸ್‌ಗೆ ಹೊರಡಿ' ಎನ್ನುತ್ತಾ ಧೂಳು ತುಂಬಿದ ಕಿಚನ್‌ನನ್ನು ಸ್ವಚ್ಛ ಮಾಡಲು ಪ್ರಿಯಾಂಕಾ ಮುಂದಾದಳು.

***

ಅರವಿಂದನ ತಾತ ಹೇಳಿದ್ದ ಆ ಕತೆ....

ಇಪ್ಪತ್ತು ವರ್ಷಗಳ ಹಿಂದೆ ಹೇಳಿದ ತಾತನ ಆಸ್ತಿ ಸಂಪತ್ತಿನ ಒಂದು ಘಟನೆ ಈ ಕ್ಷಣಕ್ಕೆ ಮತ್ತೆ ಅರವಿಂದನಿಗೆ ನೆನಪಿಗೆ ಬಂದಿತ್ತು.

ತಾನಾಗ ಇನ್ನೂ ಶಾಲೆಗೆ ಹೋಗುತ್ತಿದ್ದ ದಿನಗಳು. ತಾತ ಬಂಟ್ವಾಳದ ಯಾವುದೋ ಗ್ರಾಮದಲ್ಲಿದ್ದವರು ಎಲ್ಲವನ್ನೂ ಬಿಟ್ಟು ಮಂಗಳೂರಿಗೆ ಬಂದಿದ್ದರು. ಇವರ ಪಾಲಿಗೆ ಹತ್ತು ಮುಡಿ ಅಕ್ಕಿ ಬೆಳೆಯುತ್ತಿದ್ದ ಜಮೀನು ಬರಬೇಕಿತ್ತು. ಏನೋ ಕುಟುಂಬದಲ್ಲಿ ವಿವಾದ ಜೋರಾಗಿ, ಕೊನೆಗೆ ಕೋರ್ಟ್ ಮೆಟ್ಟಿಲು ಏರುವಂತಹ ಸ್ಥಿತಿ ಬಂದಿತ್ತು.

ಎಷ್ಟೇ ವರ್ಷ ವ್ಯಾಜ್ಯ ನಡೆಯಲಿ, ತಾನು ಕೋರ್ಟ್‌ನಲ್ಲಿ ಗೆದ್ದರೆ ಅಷ್ಟೂ ಜಮೀನನ್ನು ಒಂದು ಅನಾಥಾಶ್ರಮಕ್ಕೆ ಬಿಟ್ಟು ಕೊಡುವೆ ಎಂದು ಸಂಕಲ್ಪ ಮಾಡಿದ್ದರು ತಾತ. ಅಂತೂ ಅವರು ಸಾಯುವ ಎರಡು ವರ್ಷದ ಮೊದಲು ಕೋರ್ಟ್‌ನಿಂದ ತೀರ್ಪು ತಾತನ ಪರವಾಗಿಯೇ ಬಂದಿತ್ತು. ಅವರು ಖುಷಿಯಿಂದ ಜಮೀನನ್ನು ಆ ಅನಾಥಾಶ್ರಮಕ್ಕೆ ಬಿಟ್ಟು ಕೊಟ್ಟಿದ್ದರು.

ತಾತನ ಮಕ್ಕಳೆಲ್ಲಾ ಒಳ್ಳೆಯ ಉದ್ಯೋಗವನ್ನೇ ಹಿಡಿದಿದ್ದರು. ಆದರೂ ಹತ್ತು ಮುಡಿ ಅಕ್ಕಿ ಬೆಳೆಯುವ ಗದ್ದೆ ಜಮೀನು ಅನಾಥಾಶ್ರಮಕ್ಕೆ ಬಿಟ್ಟು ಕೊಡುವುದೆಂದರೆ ಏನು? ಈಗಿನ ಕಾಲದಲ್ಲಿ ಎಷ್ಟು ರೇಟ್ ದೊರೆಯಲಿಕ್ಕಿಲ್ಲ! ಅಂದು ತಾತನ ಈ ಧಾರಾಳತನಕ್ಕೆ ಅರವಿಂದನ ದೊಡ್ಡಪ್ಪ ಚಿಕ್ಕಪ್ಪಂದಿರೆಲ್ಲಾ ಒಮ್ಮೆ ದಂಗಾಗಿ ಹೋಗಿದ್ದರು. ಆದರೂ ಯಾರೂ ಅವರನ್ನು ಪ್ರಶ್ನೆ ಮಾಡುವ ಉಸಾಬರಿಗೆ ಹೋಗಿರಲಿಲ್ಲ. ಅರವಿಂದನ ಅಪ್ಪನೂ ಈ ಬಗ್ಗೆ ಚಕಾರವೆತ್ತಿರಲಿಲ್ಲ. 'ಹೋಗಲಿ, ಕೊಟ್ಟದ್ದು ಅನಾಥಾಶ್ರಮಕ್ಕಲ್ಲಾ?' ಎಂದು ಎಲ್ಲರೂ ಸಮಾಧಾನವನ್ನೇ ತಾಳಿದರು. ದಿನ ಉರುಳುತ್ತಾ ನಿಧಾನವಾಗಿ ಎಲ್ಲರೂ ಅದನ್ನು ಮರೆತರು.

ಈ ಘಟನೆಯ ನಂತರ ಅರವಿಂದನ ತಾತ, ಮನೆಗೆ ಯಾರು ಬಂದರೂ ಈ ಸಂಗತಿಯನ್ನು ನೆನಪಿಸಿಕೊಳ್ಳುತ್ತಾ ಎಲ್ಲರಲ್ಲೂ ತನ್ನ 'ಸಾಹಸಗಾಥೆ'ಯನ್ನು ಬಿಚ್ಚಿಡುತ್ತಿದ್ದರು. ಕೇಳಿದವರಲ್ಲಿ ಕೆಲವರು ಅನಾಥಾಶ್ರಮಕ್ಕೆ ಬಿಟ್ಟು ಕೊಟ್ಟಿದ್ದೇಕೆ? ಅಂತ ಪ್ರಶ್ನಿಸಿದಾಗ ತಾತ ತನ್ನನ್ನು ತಾನು ಸಮರ್ಥಿಸಿ ಕೊಳ್ಳುತ್ತಿದ್ದರು. ಅವರಿಗೆ ಸಮಯ ಕಳೆಯಲು ಇದೊಂದು ಉತ್ತಮ ವಿಷಯವಾಗಿದ್ದು ಅವರು ಖುಷಿ ಖುಷಿಯಾಗಿರುತ್ತಿದ್ದರು.

* * *

ಮುಂಬಯಿಗೆ ಬಂದು ತಿಂಗಳೂ ಆಗಿರಲಿಲ್ಲ. ಅಮ್ಮನಿಂದ ಒಂದುದಿನ ಫೋನ್ ಬಂತು. ಶ್ರೀಪತಿ ಮಾವ ಯಾರಲ್ಲೂ ಕೇಳದೆ ಕೋರ್ಟ್‌ಗೆ ಹೋಗುವ ತಯಾರಿಯಲ್ಲಿದ್ದಾರೆ ಎಂದು.

'ಯಾಕೋ ಆತ ತುಂಬಾ ಕೋಪದಲ್ಲಿದ್ದಾನೆ. ನಿನ್ನೆ ಮನೆಗೆ ಬಂದಿದ್ದ. ನಾನಂದೆ 'ನನಗೇನೂ ಬೇಡ ಮಹಾರಾಯಾ. ನನ್ನ ಪಾಲಿನದ್ದು ಬೇಕಿದ್ರೆ ನೀನೇ ಸ್ವಲ್ಪ ಇಟ್ಟುಕೋ. ಆಸ್ತಿ ವಿಚಾರದಲ್ಲಿ ಕೋರ್ಟ್‌ನ ಮೆಟ್ಟಿಲು ಮಾತ್ರ ಹತ್ತೋದು ಬೇಡ. ಇವರ ತಂದೆ, ನನ್ನ ಮಾವ ಕೂಡಾ ಆಸ್ತಿ ಎಲ್ಲಾ ಅನಾಥಾಶ್ರಮಕ್ಕೇ ಕೊಟ್ಟವರು. ಇನ್ನು ನನ್ನ ತಾಯಿ ಮನೆಯಿಂದಲೂ ನನಗೇನೂ ಅಪೇಕ್ಷೆ ಇಲ್ಲ. ಒಟ್ಟಿನಲ್ಲಿ ನೀವೆಲ್ಲಾ ಸುಖ ಸಂತೋಷದಿಂದ ಇರಬೇಕು ಅಂದಿದ್ದೇನೆ. ಆದರೂ ಯಾರೋ ಲಾಯರ್ ಮೂಲಕ ಕೋರ್ಟ್‌ಗೆ ಹೋಗುವ ತಯಾರಿಯಲ್ಲಿದ್ದಾನೆ' ಅಂದಳು ಅಮ್ಮ.

'ಒಳ್ಳೆಯದೇ ಆಯಿತು ಅಮ್ಮಾ, ಅವರು ಆಸ್ತಿ ಸಂಪತ್ತು ಎಲ್ಲಾ ಎಷ್ಟು ದಿನ ಹಿಡಿದಿಟ್ಟುಕೊಳ್ಳಲು ಸಾಧ್ಯ? ಏನೂ ಮಾಡಿಕೊಳ್ಳಲಿ ಬಿಡು' ಎಂದು ಅಮ್ಮನನ್ನು ಸಮಾಧಾನ ಪಡಿಸಿದ ಅರವಿಂದ. ಮತ್ತೆ ನೆನಪಾಗಿ 'ಅದಕ್ಕೆ ಅಪ್ಪ ಏನಂದರು? ಒಪ್ಪಿದರಾ?' ವಿಚಾರಿಸಿದ.

'ಅವರಿಗೇನೂ ಬೇಡ ಅರವಿಂದ. ಅವರ ಅಪ್ಪನಿಂದಲೂ ಏನೂ ಸಿಗಲಿಲ್ಲವಲ್ಲಾ ಅವರಿಗೆ. ಆಸ್ತಿಯ ಬಗ್ಗೆ ಎಲ್ಲಾ ತಲೆಬಿಸಿ ಮಾಡಿಕೊಂಡವರಲ್ಲಾ ನಿನ್ನ ಅಪ್ಪ. ನಮಗೆ ನೀನಿದ್ದೀಯಲ್ಲಾ? ಅಷ್ಟೇ ಸಾಕು' ಎಂದು ನಿಟ್ಟುಸಿರು ಬಿಟ್ಟರು ಅರವಿಂದನ ಅಮ್ಮ. ಅಮ್ಮನ ಮಾತಿಗೆ ಅರವಿಂದನೂ ನೆಮ್ಮದಿಪಟ್ಟ.

ಅರವಿಂದನಿಗೆ ಮತ್ತೆ ತಾತ ನೆನಪಾದರು. ಜಮೀನು ವಿವಾದದಲ್ಲಿ ಜಯ ಸಿಕ್ಕಿದರೆ, ತಾನು ಅನಾಥಾಶ್ರಮಕ್ಕೆ ಆ ಜಮೀನು ಬಿಟ್ಟು ಕೊಡುವೆ ಎಂದು ಹೇಳಿದ ಮಾತುಗಳು ನೆನಪಾಯಿತು. ಮನೆಗೆ ಬಂದು ಹೋಗುವವರಲ್ಲೆಲ್ಲಾ ತಾತ ಈ ವಿಷಯ ಹೇಳಿಕೊಂಡು ಎಷ್ಟು ಆನಂದಪಡುತ್ತಿದ್ದರಲ್ಲಾ?

ಬಹುಶಃ ತಾತನಿಗೆ ಈ ಜಮೀನು ತನ್ನ ಮಕ್ಕಳಲ್ಲಿ ವಿವಾದ ಹುಟ್ಟಿಸುವ, ಮಕ್ಕಳ ನಡುವಿನ ಉತ್ತಮ ಒಡನಾಟ, ಬಾಂಧವ್ಯ, ಮೈತ್ರಿಗಳ ನಡುವೆ ಬಿರುಕಿನ ಗೋಡೆ ಬೆಳೆಸುವ ಸಾಧ್ಯತೆಗಳಿವೆ ಎಂದು ಮೊದಲೇ ತಿಳಿದಿರಬೇಕು ಅನ್ನಿಸುತ್ತೆ. ಅಂತಹ ದೃಶ್ಯಗಳು ತನ್ನ ವಂಶ ಪರಂಪರೆಯಲ್ಲಿ ಎಂದಿಗೂ ಮೂಡಬಾರದೆಂದು ಅವರು ಅನಾಥಾಶ್ರಮಕ್ಕೆ ಬಿಟ್ಟು ಕೊಟ್ಟಿರಬಹುದೇ? ಇಲ್ಲವಾದರೆ ಶ್ರೀಪತಿ ಮಾವನ ಮನೆಯವರಂತೆ ತನ್ನ ಅಪ್ಪಚಿಕ್ಕಪ್ಪನವರೂ ಎಲ್ಲರೂ ಕಚ್ಚಾಡುವ ದೃಶ್ಯಗಳಿರುತ್ತಿತ್ತಲ್ಲಾ? ತಾನೂ ಅದರ ನಡೆವೆ ಸಿಲುಕಿ ಒದ್ದಾಟ ನಡೆಸಿ ಚಿಕ್ಕಪ್ಪ ದೊಡ್ಡಪ್ಪರಲ್ಲಿ ನಿಷ್ಠುರ ಮಾಡಿಕೊಳ್ಳುತ್ತಿದ್ದೆನಲ್ಲಾ.

ಯೋಚಿಸುತ್ತಿದ್ದಂತೆ ಆ ಕ್ಷಣಕ್ಕೆ ಅರವಿಂದನಿಗೆ ತನ್ನ ತಾತ ಗ್ರೇಟ್ ಅನಿಸಿದರು. ಆಲ್ಬಮ್‌ನಲ್ಲಿದ್ದ ತಾತನ ಫೋಟೋವನ್ನು ಹುಡುಕಲು ಮುಂದಾದ. ನಾಳೆ ಇದನ್ನು ಸ್ಟುಡಿಯೋಗೆ ಹೋಗಿ ದೊಡ್ಡದು ಮಾಡಿಸಿ ತರಬೇಕು. ಹಾಲ್‌ನಲ್ಲಿ ಟಿವಿ ಮೇಲೆ ಎದ್ದು ಕಾಣುವಂತೆ ಇರಿಸಬೇಕು. ಖುಷಿಯಿಂದಿದ್ದ ಸಂಬಂಧದ ಒಳಗೆ ಕಚ್ಚಾಟ ಕಾಣಿಸದೆ ಸೌಹಾರ್ದತೆಯಲ್ಲಿ ಬದುಕುವಂತೆ ಹೆಜ್ಜೆ ಇರಿಸಿದ ತಾತನ ಅಂದಿನ ನಿರ್ಧಾರಕ್ಕೆ ಅರವಿಂದ ಈಗ ಹೆಮ್ಮೆ ಪಟ್ಟುಕೊಂಡ.